ಕ್ಯಾಂಟೋನ್ಮೆಂಟ್ ವ್ಯಾಪ್ತಿಯಲ್ಲಿ ಪಾರ್ಕಿಂಗ್ ಶುಲ್ಕಕ್ಕೆ ಹೊಸ ಟೆಂಡರ್; ಆದಾಯ ಹೆಚ್ಚಳಕ್ಕೆ ಕ್ರಮ

ಉದಯಕಾಲ ನ್ಯೂಸ್

ಬೆಳಗಾವಿ: ನಗರದ ಕ್ಯಾಂಟೋನ್ಮೆಂಟ್ ಮಂಡಳಿಯು ತನ್ನ ವ್ಯಾಪ್ತಿಯ ಪ್ರಮುಖ ರಸ್ತೆ ಹಾಗೂ ಸಾರ್ವಜನಿಕ ಸ್ಥಳಗಳಲ್ಲಿ ವಾಹನ ನಿಲುಗಡೆ ವ್ಯವಸ್ಥೆಯನ್ನು ಸುಧಾರಿಸುವ ಜೊತೆಗೆ ಆದಾಯವನ್ನು ಹೆಚ್ಚಿಸುವ ಉದ್ದೇಶದಿಂದ ಹೊಸ ಟೆಂಡರ್ ಪ್ರಕ್ರಿಯೆಗೆ ಚಾಲನೆ ನೀಡಿದೆ. ಹಿಂದಿನ ಗುತ್ತಿಗೆ ಅವಧಿ ಮುಕ್ತಾಯಗೊಂಡಿರುವ ಹಿನ್ನೆಲೆಯಲ್ಲಿ ವಿವಿಧ ಪಾರ್ಕಿಂಗ್ ಸ್ಥಳಗಳ ನಿರ್ವಹಣೆಗೆ ಇ-ಟೆಂಡರ್ ಆಹ್ವಾನಿಸಲಾಗಿದೆ.

ಕ್ಯಾಂಟೋನ್ಮೆಂಟ್ ಮಂಡಳಿಯ ಪ್ರಕಟಣೆಯ ಪ್ರಕಾರ, ರೈಲು ನಿಲ್ದಾಣದ ಮುಂಭಾಗದ ಬಸ್ ನಿಲ್ದಾಣ ಸೇರಿದಂತೆ ಹಲವು ಪ್ರಮುಖ ಪ್ರದೇಶಗಳಲ್ಲಿ ಪಾರ್ಕಿಂಗ್ ಶುಲ್ಕ ಸಂಗ್ರಹಣೆಗಾಗಿ ಹೊಸ ಗುತ್ತಿಗೆದಾರರನ್ನು ಆಯ್ಕೆ ಮಾಡಲಾಗುತ್ತದೆ. ಇದರಿಂದ ಪಾರ್ಕಿಂಗ್ ವ್ಯವಸ್ಥೆ ಇನ್ನಷ್ಟು ಸುಸೂತ್ರವಾಗುವ ಜೊತೆಗೆ ಮಂಡಳಿಯ ಆದಾಯವೂ ಹೆಚ್ಚುವ ನಿರೀಕ್ಷೆ ವ್ಯಕ್ತವಾಗಿದೆ.

ಇ-ಟೆಂಡರ್‌ನಲ್ಲಿ ಕ್ಯಾಂಟೋನ್ಮೆಂಟ್ ವ್ಯಾಪ್ತಿಯ ಕತ್ತಲ ಮಾರ್ಕೆಟ್‌ನ ಒಳಭಾಗದಲ್ಲಿರುವ ಶೆಡ್ ಹಾಗೂ ಅಂಗಡಿಗಳನ್ನು ಹೊರತುಪಡಿಸಿ ಉಳಿದ ಪಾರ್ಕಿಂಗ್ ಸ್ಥಳಗಳು ಒಳಗೊಂಡಿವೆ. ಆರ್‌ಟಿಒ ರಸ್ತೆ, ಕಲಾದಗಿ ರಸ್ತೆಯ ಎರಡೂ ಬದಿಗಳು, ಉತ್ತರ ಟೆಲಿಗ್ರಾಫ್ ರಸ್ತೆ, ನ್ಯೂ ಹೆಡ್ ಪೋಸ್ಟ್ ಆಫೀಸ್ ರಸ್ತೆ, ರೈಲು ನಿಲ್ದಾಣದ ಎರಡೂ ಬದಿಯ ರಸ್ತೆಗಳು, ರೈಲು ನಿಲ್ದಾಣ ಬಸ್ ನಿಲ್ದಾಣ ಹಾಗೂ ಬಿ.ಸಿ. 147 ಪ್ರದೇಶದ

ಪಾರ್ಕಿಂಗ್ ಸ್ಥಳಗಳಲ್ಲಿ ವಾಹನ ನಿಲುಗಡೆ ಶುಲ್ಕ ಸಂಗ್ರಹಿಸಲಾಗುತ್ತದೆ.

ಟೆಂಡರ್ ಪ್ರಕ್ರಿಯೆ ಆಗಸ್ಟ್ 7ರಿಂದ ಆರಂಭವಾಗಲಿದ್ದು, ಆಸಕ್ತ ಗುತ್ತಿಗೆದಾರರು ಆಗಸ್ಟ್ 17ರವರೆಗೆ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ನಿಯಮಾನುಸಾರ ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ಪಾರ್ಕಿಂಗ್ ನಿರ್ವಹಣೆಯ ಜವಾಬ್ದಾರಿಯನ್ನು ಹಸ್ತಾಂತರಿಸಲಾಗುತ್ತದೆ.

ಕ್ಯಾಂಟೋನ್ಮೆಂಟ್ ವ್ಯಾಪ್ತಿಯ ಸಾರ್ವಜನಿಕ ಸ್ಥಳಗಳಲ್ಲಿ ವಾಹನಗಳ ಸಂಖ್ಯೆ ದಿನದಿಂದ ದಿನಕ್ಕೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಪಾರ್ಕಿಂಗ್ ವ್ಯವಸ್ಥೆಯನ್ನು ಶಿಸ್ತುಬದ್ಧಗೊಳಿಸುವುದು ಹಾಗೂ ರಸ್ತೆಬದಿಯ ಅನಿಯಂತ್ರಿತ ವಾಹನ ನಿಲುಗಡೆಯನ್ನು ತಡೆಯುವುದು ಮಂಡಳಿಯ ಪ್ರಮುಖ ಉದ್ದೇಶವಾಗಿದೆ. ಈ ಹೊಸ ಟೆಂಡರ್ ಮೂಲಕ ಸಾರ್ವಜನಿಕರಿಗೆ ವ್ಯವಸ್ಥಿತ ಪಾರ್ಕಿಂಗ್ ಸೌಲಭ್ಯ ದೊರೆಯುವ ಜೊತೆಗೆ ಕ್ಯಾಂಟೋನ್ಮೆಂಟ್ ಮಂಡಳಿಯ ಆದಾಯದಲ್ಲೂ ಗಮನಾರ್ಹ ಏರಿಕೆಯಾಗುವ ಸಾಧ್ಯತೆ ಇದೆ.

ಕುಡಚಿ ಸೇತುವೆ ಮೇಲೆ ಕೃಷ್ಣೆಯ ಅಬ್ಬರ; ಸಂಚಾರ ಮತ್ತೆ ಸ್ಥಗಿತ

ಪಶ್ಚಿಮ ಮಹಾರಾಷ್ಟ್ರದ ಭಾರೀ ಮಳೆಯಿಂದ ನೀರಿನ ಮಟ್ಟ ಏರಿಕೆ-ಪರ್ಯಾಯ ಮಾರ್ಗಗಳಿಗೆ ವಾಹನಗಳ ದಿಕ್ಕು ಬದಲಾವಣೆ, ಪ್ರವಾಹ ಭೀತಿಯ 12 ಗ್ರಾಮಗಳಿಗೆ ಆಡಳಿತ ಎಚ್ಚರಿಕೆ

ಉದಯಕಾಲ ನ್ಯೂಸ್

ಬೆಳಗಾವಿ: ಪಶ್ಚಿಮ ಮಹಾರಾಷ್ಟ್ರ ಹಾಗೂ ಕೃಷ್ಣಾ ನದಿಯ ಮೇಲ್ದಂಡೆ ಪ್ರದೇಶಗಳಲ್ಲಿ ಸುರಿಯುತ್ತಿರುವ ಭಾರೀ ಮಳೆಯ ಪರಿಣಾಮವಾಗಿ ಕೃಷ್ಣಾ ನದಿಯ ನೀರಿನ ಮಟ್ಟ ಮತ್ತೆ ಏರಿಕೆಯಾಗಿದೆ. ಪರಿಣಾಮ,ಜಿಲ್ಲೆಯ ಕುಡಚಿ-ಉಗಾರಖುರ್ದ ಸಂಪರ್ಕ ಸೇತುವೆ ಮೇಲೆ ನೀರು ಹರಿದು, ಭಾನುವಾರ ಸಂಜೆಯಿಂದ ಈ ಮಾರ್ಗದ ಸಂಚಾರವನ್ನು ಸಂಪೂರ್ಣ ಸ್ಥಗಿತಗೊಳಿಸಲಾಗಿದೆ. ಸಾರ್ವಜನಿಕರ ಸುರಕ್ಷತೆಯನ್ನು ಗಮನದಲ್ಲಿಟ್ಟುಕೊಂಡು ಪೊಲೀಸ್ ಹಾಗೂ ಕಂದಾಯ ಇಲಾಖೆ ಅಧಿಕಾರಿಗಳು ಬ್ಯಾರಿಕೇಡ್‌ಗಳನ್ನು ಅಳವಡಿಸಿ ವಾಹನ ಸಂಚಾರಕ್ಕೆ ನಿರ್ಬಂಧ ಹೇರಿದ್ದಾರೆ.

ಕಳೆದ ನಾಲ್ಕೈದು ದಿನಗಳಿಂದ ಕೃಷ್ಣಾ ನದಿಯಲ್ಲಿ ನೀರಿನ ಹರಿವು ನಿರಂತರವಾಗಿ ಹೆಚ್ಚುತ್ತಿದ್ದು, ಭಾನುವಾರ ಮಧ್ಯಾಹ್ನದಿಂದಲೇ ಸೇತುವೆಯ ಮೇಲೆ ನೀರು ಹರಿಯತೊಡಗಿತ್ತು. ಸಂಜೆ ವೇಳೆಗೆ ನೀರಿನ ಮಟ್ಟ ಮತ್ತಷ್ಟು ಏರಿಕೆಯಾದ ಹಿನ್ನೆಲೆಯಲ್ಲಿ ಮುನ್ನೆಚ್ಚರಿಕಾ ಕ್ರಮವಾಗಿ ರಸ್ತೆ ಬಂದ್ ಮಾಡಲಾಯಿತು. ಏಕಾಏಕಿ ಸಂಚಾರ ಸ್ಥಗಿತಗೊಂಡ ಕಾರಣ ಅನೇಕ ದ್ವಿಚಕ್ರ ಹಾಗೂ ನಾಲ್ಕುಚಕ್ರ ವಾಹನ ಸವಾರರು ಮಧ್ಯದಲ್ಲೇ ತೊಂದರೆಗೆ

ಸಿಲುಕಿದರು. ಪೊಲೀಸರು ತಕ್ಷಣ ಸ್ಥಳಕ್ಕೆ ಧಾವಿಸಿ ವಾಹನಗಳನ್ನು ಹಿಂದಕ್ಕೆ ತಿರುಗಿಸಿ ಪರಿಸ್ಥಿತಿಯನ್ನು ನಿಯಂತ್ರಿಸಿದರು.

ಪ್ರಸ್ತುತ ಸೇತುವೆಯ ಮೇಲೆ ಸುಮಾರು ಎರಡುರಿಂದ ಎರಡೂವರೆ ಅಡಿ ಎತ್ತರದಲ್ಲಿ ನೀರು ಹರಿಯುತ್ತಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ. ಇದರಿಂದ ಜಮಖಂಡಿ ಭಾಗದಿಂದ ಮಿರಜ್ ಹಾಗೂ ಸಾಂಗಲಿ ಯತ್ತ ತೆರಳುವ ವಾಹನಗಳನ್ನು ಹಾರೂಗೇರಿ ಕ್ರಾಸ್-ಅಥಣಿ ಮಾರ್ಗದ ಮೂಲಕ ಹಾಗೂ ರಾಯಬಾಗ ಮತ್ತು ಚಿಂಚಲಿ ಕಡೆಯ ವಾಹನಗಳನ್ನು ಅಂಕಲಿ ಮಾರ್ಗಕ್ಕೆ ಪರ್ಯಾಯವಾಗಿ ತಿರುಗಿಸಲಾಗಿದೆ.

ಇದೇ ವೇಳೆ ಜಮಖಂಡಿ, ರಬ ಕವಿ, ಬನಹಟ್ಟಿ, ಮುಧೋಳ ಹಾಗೂ ಹಾರೂಗೇರಿ ಭಾಗದ ಪ್ರಯಾಣಿಕರು ಕುಡಚಿಗೆ ಬಂದು ಅಲ್ಲಿಂದ ರೈಲಿನ ಮೂಲಕ ಮಿರಜ್ ಹಾಗೂ ಸಾಂಗಲಿಗೆ ಪ್ರಯಾಣಿಸುತ್ತಿರುವುದರಿಂದ ಕುಡಚಿ ರೈಲು ನಿಲ್ದಾಣದಲ್ಲಿ ಪ್ರಯಾಣಿಕರ ದಟ್ಟಣೆ ಹೆಚ್ಚಾಗಿದೆ.

ರಾಯಬಾಗ ತಹಶೀಲ್ದಾರ್ ಮಹಾದೇವ ಸಣ್ಣಮುರೆ ಸ್ಥಳಕ್ಕೆ ಭೇಟಿ ನೀಡಿ ಅಧಿಕಾರಿಗಳೊಂದಿಗೆ ಪರಿಸ್ಥಿತಿ ಪರಿಶೀಲಿಸಿದರು. ಕೃಷ್ಣಾ ನದಿ ತೀರದ ಪ್ರವಾಹ ಭೀತಿಯಲ್ಲಿರುವ 12 ಗ್ರಾಮಗಳಲ್ಲಿ ಅಗತ್ಯ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗಿದ್ದು, ಪ್ರತಿ ಗ್ರಾಮಕ್ಕೂ ತಾಲೂಕು ಮಟ್ಟದ ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದು ಅವರು ತಿಳಿಸಿದರು. ಗ್ರಾಮ ಮಟ್ಟದಲ್ಲಿ ತಹಶೀಲ್ದಾರ್ ಕಚೇರಿ, ಗ್ರಾಮ ಲೆಕ್ಕಧಿಕಾರಿ, ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು ಸೇರಿದಂತೆ ವಿವಿಧ ಇಲಾಖೆಗಳ ಸಿಬ್ಬಂದಿಯನ್ನು ಸಜ್ಜುಗೊಳಿಸಲಾಗಿದ್ದು, ಯಾವುದೇ ತುರ್ತು ಪರಿಸ್ಥಿತಿಯನ್ನು ಎದುರಿಸಲು ಆಡಳಿತ ಸಂಪೂರ್ಣ ಸಿದ್ಧವಾಗಿದೆ ಎಂದು ಸ್ಪಷ್ಟಪಡಿಸಿದರು.

ಸದ್ಯ ಪ್ರವಾಹ ಪರಿಸ್ಥಿತಿ ನಿಯಂತ್ರಣದಲ್ಲಿದ್ದರೂ, ಮಹಾರಾಷ್ಟ್ರ ಭಾಗದಲ್ಲಿ ಮಳೆ ಮುಂದುವರಿದರೆ ಕೃಷ್ಣಾ ನದಿಯ ನೀರಿನ ಮಟ್ಟ ಮತ್ತಷ್ಟು ಏರಿಕೆಯಾಗುವ ಸಾಧ್ಯತೆ ಇರುವುದರಿಂದ ನದಿಪಾತ್ರದ ಗ್ರಾಮಗಳ ಜನರು ಎಚ್ಚರಿಕೆಯಿಂದಿರಬೇಕು ಎಂದು ಅಧಿಕಾರಿಗಳು ಮನವಿ ಮಾಡಿದ್ದಾರೆ. ಸಾರ್ವಜನಿಕರು ಸೇತುವೆ ಹಾಗೂ ನದಿ ತೀರ ಪ್ರದೇಶಗಳಿಗೆ ಅನಗತ್ಯವಾಗಿ ತೆರಳದಂತೆ ಜಿಲ್ಲಾಡಳಿತ ಸೂಚನೆ ನೀಡಿದೆ.

ಅದ್ದೂರಿ ಸ್ವಾತಂತ್ರ್ಯೋತ್ಸವ ಆಚರಣೆಗೆ ನಿರ್ಧಾರ

ಉದಯಕಾಲ ನ್ಯೂಸ್

ರಾಮದುರ್ಗ: ಆಗಸ್ಟ್-15 ರಂದು ತಾಲೂಕಾ ಮಟ್ಟದಲ್ಲಿ ಸ್ವಾತಂತ್ರ್ಯ ದಿನಾಚರಣೆ ಪ್ರಯುಕ್ತ ಸೋಮವಾರ ನಗರದ ತಾಲೂಕಾ ಆಡಳಿತ ಸೌಧದ ತಹಶೀಲ್ದಾರ ಕಾರ್ಯಾಲಯದಲ್ಲಿ ತಹಶೀಲ್ದಾರ ಪ್ರಕಾಶ ಗಾಯಕವಾಡ ಅವರ ಅಧ್ಯಕ್ಷತೆಯಲ್ಲಿ ಪೂರ್ವ ಸಿದ್ಧತಾ ಸಭೆ ಜರುಗಿತು.

ತಹಶೀಲ್ದಾರ ಪ್ರಕಾಶ ಗಾಯಕವಾಡ ಮಾತನಾಡಿ, ವಿವಿಧ ಇಲಾಖೆಯ ಅಧಿಕಾರಿಗಳು ತಮ್ಮ ಕಾರ್ಯಾಲಯದಲ್ಲಿ ಧ್ವಜಾರೋಹಣ ಮುಗಿಸಿಕೊಂಡು ತಹಶೀಲ್ದಾರ ಕಾರ್ಯಾಲಯಕ್ಕೆ ಆಗಮಿಸಬೇಕು. ತೇರ ಬಜಾರದಲ್ಲಿ ಸಾರ್ವಜನಿಕ ಧ್ವಜಾರೋಹಣವನ್ನು ಶಾಸಕರಾದ ಅಶೋಕ ಪಟ್ಟಣ ಅವರು ನೆರವೇರಿಸಲಿದ್ದು, ಅರಮನೆ ಆವರಣದಲ್ಲಿ ತಾಲೂಕಾಡಳಿತದ ನೇತೃತ್ವದಲ್ಲಿ ನಡೆಯುವ ಧ್ವಜಾರೋಹಣ ಸೇರಿ ಸರ್ವ ಕಾರ್ಯಕ್ರಮಗಳಲ್ಲಿಯೂ ಅಧಿಕಾರಿಗಳು ಮತ್ತು ಸಿಬ್ಬಂದಿ ಕಡ್ಡಾಯವಾಗಿ ಪಾಲ್ಗೊಳ್ಳಬೇಕು ಎಂದು ಕರೆ ನೀಡಿದರು.

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ಮಾಡಿದ ಮಹನೀಯರನ್ನು ಸತ್ಕರಿಸುವುದು. ಎಸ್.ಎಸ್.ಎಲ್.ಸಿ ಹಾಗೂ ದ್ವಿತೀಯ ಪಿಯುಸಿಯಲ್ಲಿ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳಿಗೆ ಸತ್ಕಾರ, 32 ವಿವಿಧ ಇಲಾಖೆಗಳಲ್ಲಿ ಜನಸ್ನೇಹಿಯಾಗಿ ಕೆಲಸ ಮಾಡಿದ ಅಧಿಕಾರಿಗಳು ಹಾಗೂ ಸರಕಾರಿ ನೌಕರರನ್ನು ಸತ್ಕರಿಸಲಾಗುವುದು. ವಿವಿಧ ಪಥವೀಯಲ್ಲಿ ವಿಶೇಷ ಸಾಧನೆ ಗೈದ ಅಭ್ಯರ್ಥಿಗಳು ಗೌರವಿಸುವುದು ಸೇರಿ ಅದ್ದೂರಿಯಾಗಿ ಸ್ವಾತಂತ್ರ್ಯ ದಿನಾಚರಣೆ ಆಚರಣೆ ಮಾಡುವ ಕುರಿತು ಸಭೆಯಲ್ಲಿ ಚರ್ಚಿಸಲಾಯಿತು.

ಈ ಸಂದರ್ಭದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿ ಸುರೇಂದ್ರ ಕಾಂಬಳೆ, ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ವಿಸ್ತೀರ್ಣಾಧಿಕಾರಿ ವಿಜಯಕುಮಾರ ರಣಕಾಂಬೆ, ಶಿಶು ಅಭಿವೃದ್ಧಿ ಅಧಿಕಾರಿ ಶಂಕರ ಕುಂಬಾರ, ಪಿ.ಡಿ. ಕಾಲವಾಡ ಸೇರಿದಂತೆ ತಾಲೂಕಾ ಮಟ್ಟದ ಅಧಿಕಾರಿಗಳು, ವಿವಿಧ ಸಂಘಟನೆಗಳ ಮುಖಂಡರು ಇದ್ದರು.

ಅಶೋಕ ಪಟ್ಟಣಗೆ ಕೈ ತಪ್ಪಿದ ಸಚಿವ ಸ್ಥಾನ: ಪ್ರತಿಭಟನೆ

ಉದಯಕಾಲ ನ್ಯೂಸ್

ರಾಮದುರ್ಗ: ಶಾಸಕ ಅಶೋಕ ಪಟ್ಟಣ ಅವರಿಗೆ ಸಚಿವ ಸ್ಥಾನ ಕೈ ತಪ್ಪಿದ್ದಕ್ಕಾಗಿ ಸ್ಥಳೀಯ ಯುವ ಕಾಂಗ್ರೆಸ್ ಪದಾಧಿಕಾರಿಗಳು ಹಾಗೂ ಅವರ ಅಭಿಮಾನಿ ಬಳಗ ನಗರದ ಹುತಾತ್ಮ ಸರ್ಕಲ್‌ನಲ್ಲಿ ಪ್ರತಿಭಟನೆ ನಡೆಸಿದರು.

ಕಾಂಗ್ರೆಸ್ ಹೈ ಕಮಾಂಡ ಅಶೋಕ ಪಟ್ಟಣ ಅವರ ಹಿರಿತನಕ್ಕೆ ಬೆಲೆ ನೀಡಿಲ್ಲ. ಮೂರು ಬಾರಿ ಶಾಸಕರಾಗಿರುವ ಪಟ್ಟಣ ಅವರಿಗೆ ಸಚಿವ ಸ್ಥಾನ ನೀಡುವುದನ್ನು ಕಡೆಗಣಿಸಿದೆ. ಅವರ ತಂದೆ-ತಾಯಿ ಸ್ವಾತಂತ್ರ್ಯ ಹೋರಾಟಗಾರಾಗಿ ಶಾಸಕರಾಗಿ ಸೇವೆ ಸಲ್ಲಿಸಿದ್ದಾರೆ. ಕಾಂಗ್ರೆಸ್ ಪಕ್ಷಕ್ಕೆ ನಿಷ್ಠಾವಂತರಾಗಿದ್ದ ಅಶೋಕ ಪಟ್ಟಣ ಅವರಿಗೆ ಸಚಿವ ಸಂಪುಟಕ್ಕೆ ಸೇರ್ಪಡೆ ಮಾಡಿಕೊಳ್ಳದೇ ಇರುವುದು ಖಂಡನೀಯ ಎಂದು ಅವರ ಅಭಿಮಾನಿಗಳು ಹಾಗೂ ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದರು.

ಈ ಸಂದರ್ಭದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಬಿ. ರಂಗನಗೌಡ್ರ, ಯುವ ಕಾಂಗ್ರೆಸ್ ಮುಖಂಡರಾದ ರಮೇಶ ಬಂಡಿವಡ್ಡರ, ಬಸವರಾಜ ಪ್ರಧಾನಿ, ಸಾಗರ ಮುನವಳ್ಳಿ

ಸಚಿವ ಸ್ಥಾನ ನನಗೂ ಸಿಗುತ್ತದೆ ಎಂಬ ಭರವಸೆ ಇತ್ತು. ಸ್ಥಾನ ದೊರೆಯದೇ ಇರುವುದು ನೋವುಂಟು ಮಾಡಿದೆ. ನಮ್ಮ ತಂದೆ-ತಾಯಿ ಕಾಲದಿಂದಲೂ ಪಕ್ಷಕ್ಕೆ ನಿಷ್ಠಾವಂತರಾಗಿ ಸೇವೆ ಸಲ್ಲಿಸುತ್ತಿದ್ದೇವೆ. ಪಕ್ಷಕ್ಕೆ ದ್ರೋಹ ಮಾಡುವ ನಿರ್ಧಾರ ತೆಗೆದುಕೊಳ್ಳದೇ, ಪಕ್ಷದಲ್ಲಿದ್ದುಕೊಂಡು ನನ್ನ ಕೆಲಸ ಮುಂದುವರೆಸುತ್ತೇನೆ. ಮುಂದಿನ ದಿನಮಾನಗಳಲ್ಲಿ ಪಕ್ಷದ ವರಿಷ್ಠರು ನಿಷ್ಠಾವಂತರಿಗೆ ಅವಕಾಶ ಕಲ್ಪಿಸುವ ನಿರ್ಧಾರ ತೆಗೆದುಕೊಳ್ಳಬೇಕು.

-ಅಶೋಕ ಪಟ್ಟಣ
ರಾಮದುರ್ಗ ಶಾಸಕ.

ಸೇರಿದಂತೆ ಯುವ ಕಾಂಗ್ರೆಸ್ ಪದಾಧಿಕಾರಿಗಳು ಹಾಗೂ ಪಕ್ಷದ ಮುಖಂಡರು ಇದ್ದರು.

ಐಡಿಎಫ್ಸಿ ಫರ್ಸ್ಟ್ ಬ್ಯಾಂಕ್ ಲಿಮಿಟೆಡ್
IDFC FIRST Bank
(ಹಿಂದಿನ ಕ್ಯಾಪಿಟಲ್ ಫರ್ಸ್ಟ್ ಲಿಮಿಟೆಡ್ ಮತ್ತು ಐಡಿಎಫ್ಸಿ ಬ್ಯಾಂಕ್ ಲಿಮಿಟೆಡ್ನೊಂದಿಗೆ ವಿಲೀನಗೊಂಡಿತು)
CIN: L65110TN2014PLC097792, ನೋಂದಾಯಿತ ಕಚೇರಿ: – KRM ಟವರ್ಸ್, 8ನೇ ಮಹಡಿ, ಹ್ಯಾರಿಂಗ್ಟನ್ ರಸ್ತೆ, ಚೆಟ್ಪೆಟ್, ಚೆನ್ನೈ–600031. ದೂರವಾಣಿ: +91 44 4564 4000 | ಫ್ಯಾಕ್ಸ್: +91 44 4564 4022

ಅನುಬಂಧ IV [ನಿಯಮ 8(1)] ಸ್ವಾಧೀನ ಸೂಚನೆ (ಸ್ಥಿರ ಆಸ್ತಿಗಾಗಿ)

ಕೆಳಗೆ ಸಹಿ ಮಾಡಿರುವವರು IDFC ಫರ್ಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫರ್ಸ್ಟ್ ಲಿಮಿಟೆಡ್ ಮತ್ತು IDFC ಬ್ಯಾಂಕ್ ಲಿಮಿಟೆಡ್ನೊಂದಿಗೆ ವಿಲೀನಗೊಂಡ) ನ ಅಧಿಕೃತ ಅಧಿಕಾರಿಯಾಗಿದ್ದು, ಹಣಕಾಸು ಆಸ್ತಿಗಳ ಸೆಕ್ಯುರಿಟೈಸೇಶನ್ ಮತ್ತು ಪುನರ್ನಿರ್ಮಾಣ ಮತ್ತು ಭದ್ರತಾ ಹಿತಾಸಕ್ತಿ ಜಾರಿ ಕಾಯ್ದೆ, 2002 ರ ಅಡಿಯಲ್ಲಿ ಮತ್ತು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳು, 2002 ರ ನಿಯಮ 3 ರೊಂದಿಗೆ ಓದಲಾದ ಸೆಕ್ಷನ್ 13(12) ಅಡಿಯಲ್ಲಿ ನೀಡಲಾದ ಅಧಿಕಾರವನ್ನು ಚಲಾಯಿಸಿ 23-04-2026 **ರಂದು ಡಿಮ್ಯಾಂಡ್ ನೋಟಿಸ್ ಅನ್ನು ಹೊರಡಿಸಿದ್ದಾರೆ. 1. ಶಿವಾನಂದ ಭೀಮಪ್ಪ ಪೂಜಾರಿ 2. ಮುತ್ತಪ್ಪ ಭೀಮಪ್ಪ ಪೂಜಾರಿ ನೋಟಿಸ್ನಲ್ಲಿ ಉಲ್ಲೇಖಿಸಲಾದ ರೂ. 5,41,431.13/- (ರೂಪಾಯಿ ಐದು ಲಕ್ಷದ ನಲವತ್ತೊಂದು ಸಾವಿರದ ನಾಲ್ಕು ನೂರ ಮೂವತ್ತೊಂದು ಮತ್ತು ಹದಿಮೂರು ಪೈಸೆ ಮಾತ್ರ) ಮೊತ್ತವನ್ನು 21 ಏಪ್ರಿಲ್ 2026 ರಂತೆ ಸದರಿ ಡಿಮ್ಯಾಂಡ್ ನೋಟಿಸ್ ಸ್ವೀಕರಿಸಿದ ದಿನಾಂಕದಿಂದ 60 ದಿನಗಳಲ್ಲಿ ಮರುಪಾವತಿಸಲು ಕರೆ ನೀಡಿದ್ದಾರೆ.**

ಸಾಲಗಾರರು ಮೊತ್ತವನ್ನು ಮರುಪಾವತಿಸಲು ವಿಫಲರಾಗಿದ್ದು, ಕೆಳಗೆ ಸಹಿ ಮಾಡಿದವರು **ಜುಲೈ 30, 2026** ರಂದು ಭದ್ರತಾ ಹಿತಾಸಕ್ತಿ (ಜಾರಿ) ನಿಯಮಗಳ 8 ನೇ ನಿಯಮದೊಂದಿಗೆ ಓದಲಾದ ಕಾಯಿದೆಯ ಸೆಕ್ಷನ್ 13 ರ ಉಪವಿಭಾಗ (4) ರ ಅಡಿಯಲ್ಲಿ ಅವರಿಗೆ ನೀಡಲಾದ ಅಧಿಕಾರವನ್ನು ಚಲಾಯಿಸಿ ಕೆಳಗೆ ವಿವರಿಸಿದ ಆಸ್ತಿಯನ್ನು ಸ್ವಾಧೀನಪಡಿಸಿಕೊಂಡಿದ್ದಾರೆ ಎಂದು ಸಾಲಗಾರರಿಗೆ ಮತ್ತು ಸಾರ್ವಜನಿಕರಿಗೆ ಈ ಮೂಲಕ ಸೂಚನೆ ನೀಡಲಾಗಿದೆ.

ಸಾಲಗಾರರು, ವಿಶೇಷವಾಗಿ ಸಾರ್ವಜನಿಕರು, ಆಸ್ತಿಯೊಂದಿಗೆ ವ್ಯವಹರಿಸದಂತೆ ಇಲ್ಲಿ ಎಚ್ಚರಿಕೆ ನೀಡಲಾಗಿದೆ ಮತ್ತು ಆಸ್ತಿಯೊಂದಿಗಿನ ಯಾವುದೇ ವ್ಯವಹಾರವು **THE IDFC FIRST BANK LIMITED (ಹಿಂದಿನ ಕ್ಯಾಪಿಟಲ್ ಫರ್ಸ್ಟ್ ಲಿಮಿಟೆಡ್ ಮತ್ತು ಐಲಈಲ ಬ್ಯಾಂಕ್ ಲಿಮಿಟೆಡ್ನೊಂದಿಗೆ ವಿಲೀನಗೊಂಡಿದೆ) ರೂ. 5,41,431.13/- (ರೂಪಾಯಿ ಐದು ಲಕ್ಷ ನಲವತ್ತೊಂದು ಸಾವಿರದ ನಾಲ್ಕು ನೂರ ಮೂವತ್ತೊಂದು ಮತ್ತು ಹದಿಮೂರು ಪೈಸೆ ಮಾತ್ರ)** ಮತ್ತು ಅದರ ಮೇಲೆನ ಬಡ್ಡಿಗೆ ಒಳಪಟ್ಟಿರುತ್ತದೆ.

ಸುರಕ್ಷಿತ ಸಾಲಗಳನ್ನು ಪುನಃ ಪಡೆದುಕೊಳ್ಳಲು ಲಭ್ಯವಿರುವ ಸಮಯಕ್ಕೆ ಸಂಬಂಧಿಸಿದಂತೆ, ಕಾಯ್ದೆಯ ಸೆಕ್ಷನ್ 13 ರ ಉಪ-ವಿಭಾಗ (8) ರ ನಿಬಂಧನೆಗಳತ್ತ ಸಾಲಗಾರರ ಗಮನವನ್ನು ಆಹ್ವಾನಿಸಲಾಗಿದೆ.

ಸ್ಥಿರ ಗುಣಲಕ್ಷಣಗಳ ವಿವರಣೆ.

ಆಸ್ತಿಯ ಎಲ್ಲಾ ಭಾಗ ಮತ್ತು ಆಸ್ತಿಯ ವಿಭಾಗಗಳು VPC ಸಂಖ್ಯೆ. 96/A, ವಿಸ್ತೀರ್ಣ 20 X 32 ಚದರ ಅಡಿ, ಹಳ್ಳಿಯಲ್ಲಿ ಇದೆ: ಕವಲಗಿ, ತಾಲ್ಲೂಕು: ಕವಲಗಿ, ಜಿಲ್ಲೆ ವಿಜಯಪುರ, ಕರ್ನಾಟಕ-586216, ಮತ್ತು ಗಡಿ: ಪೂರ್ವ: ಮಲ್ಲಪ್ಪ ಯತ್ನಾಳಕರ್ ಪಶ್ಚಿಮ: ಶಂಕರಪ್ಪ ಪೂಜಾರಿ ಉತ್ತರ: ರಸ್ತೆ ದಕ್ಷಿಣ: ರುಗಪ್ಪ ಪೂಜಾರಿ

ದಿನಾಂಕ: 30-07-2026 — ಅಧಿಕೃತ ಅಧಿಕಾರಿ
ಸ್ಥಳ: ಕರ್ನಾಟಕ — ಐಡಿಎಫ್ಸಿ ಫರ್ಸ್ಟ್ ಬ್ಯಾಂಕ್ ಲಿಮಿಟೆಡ್ (ಹಿಂದಿನ ಕ್ಯಾಪಿಟಲ್ ಫರ್ಸ್ಟ್ ಲಿಮಿಟೆಡ್
ಸಾಲ ಖಾತೆ ಸಂಖ್ಯೆ: 83755094 — ಮತ್ತು ಐಡಿಎಫ್ಸಿ ಬ್ಯಾಂಕ್ ಲಿಮಿಟೆಡ್ನೊಂದಿಗೆ ವಿಲೀನಗೊಂಡಿದೆ)